
ಇಡೀ ಬೆಟ್ಟಗಳ ಸಾಲು ವರ್ಣದ ಓಕುಳಿಯಲ್ಲಿ ನರ್ತಿಸುತ್ತಿದ್ದರೆ, ಅದರಿಂದ ಒಂದು ಕ್ಷಣ ಕಣ್ಣು ಕೀಳಲೂ ಮನಸ್ಸು ಬರದು. ಇನ್ನು ಚಳಿಗಾಲದಲ್ಲಿಯೂ ವಿಂಟರ್ ಸ್ಪೋರ್ಟ್ಸ್‌ಗಳಿಂದಾಗಿ ಇಲ್ಲಿ ಪ್ರವಾಸೋದ್ಯಮಕ್ಕೆ ಮೋಸವಿಲ್ಲ.

**ಇತಿಹಾಸದ ಹಿನ್ನೋಟ**

ಪುರಾತತ್ವಶಾಸ್ತ್ರಜ್ಞರ ಪ್ರಕಾರ, ಸುಮಾರು 250 ದಶಲಕ್ಷ ವರ್ಷಗಳ ಹಿಂದೆ

ನಂತರ 1700ರಿಂದ 1800ರ ಮಧ್ಯಭಾಗದವರೆಗೆ ಇಲ್ಲಿ ನಡೆದದ್ದು ಅಕ್ಷರಶಃ ಮರಗಳ ಮಾರಣಹೋಮ. ಮರಗಳ ದಿಮ್ಮಿಗಳ ವ್ಯಾಪಾರದಲ್ಲಿ ಲಾಭ ಕಾಣುತ್ತಿದ್ದಂತೆಯೇ ಬೃಹತ್ ಮರಗಳು ಒಂದೊಂದಾಗಿ ಧರೆಗುರುಳಿದವು. ಅವುಗಳನ್ನು ಸಾಗಿಸಲು ರೈಲ್ವೆ ದಾರಿ ನಿರ್ಮಾಣವಾಯಿತು. ಹೆಚ್ಚಿನ ಭೂಭಾಗ ಬೋಳಾಯಿತು. ಈ ಕಾರಣದಿಂದಲೇ ಈ ಪರ್ವತಗಳು ಅತಿ ಪುರಾತನವಾದರೂ ಇಲ್ಲಿನ ಹೆಚ್ಚಿನ ಭಾಗದಲ್ಲಿ ಅರಣ್ಯ ಇನ್ನೂ ಹೊಸದು.





ಖಂಡಗಳ ಘರ್ಷಣೆಯಿಂದ ಅಪಲಾಚನ್ ಪರ್ವತಗಳು ನಿರ್ಮಾಣವಾದವು. ಸ್ಮೋಕಿ ಪರ್ವತಗಳು ಅಪಲಾಚನ್ ಪರ್ವತಶ್ರೇಣಿಗಳಲ್ಲಿ ಒಂದು. ಇಷ್ಟು ಪುರಾತನವಾದ ಪರ್ವತಗಳಲ್ಲಿ 14 ಸಾವಿರ ವರ್ಷಗಳ ಹಿಂದಿನಿಂದ ಮಾನವ ವಾಸದ ಕುರುಹುಗಳಿವೆ. ಉತ್ತರದಿಂದ ವಲಸೆ ಬಂದ ಇಂಡಿಯನ್ನರು ಇಲ್ಲಿನ ಮೂಲನಿವಾಸಿಗಳು. ಇವರನ್ನು ಚರೂಕಿ ಇಂಡಿಯನ್ಸ್ ಎನ್ನುತ್ತಾರೆ. 15ನೆ ಶತಮಾನದಿಂದಾಚೆಗೆ ಯೂರೋಪಿಯನ್ನರ ಆಗಮನವಾಗುತ್ತಿದ್ದಂತೆಯೇ ಇಲ್ಲಿನ ಪರ್ವತಗಳ ಶಾಂತಿಗೆ ಭಂಗ ಬಂತು. ಸಮೀಪದ ಜಾರ್ಜಿಯಾದಲ್ಲಿ ಬಂಗಾರ ಪತ್ತೆಯಾಗಿ, ಗಣಿಗಾರಿಕೆ ಪ್ರಾರಂಭವಾಗುತ್ತಿದ್ದಂತೆಯೇ ಪ್ರಕೃತಿಯ ಮಕ್ಕಳಾಗಿ ಬದುಕುತ್ತಿದ್ದ ಚರೋಕಿಗಳು ಕಣ್ಣೀರ ಜಾಡಿನಲ್ಲಿ ಪಶ್ಚಿಮದ ಬರಡು ಭೂಮಿಯತ್ತ ವಲಸೆ ಹೋಗಬೇಕಾಯಿತು.

19ನೆ ಶತಮಾನದ ಮಧ್ಯೆಭಾಗದಲ್ಲಷ್ಟೇ ಈ ವಿಶಿಷ್ಟ ಪರಿಸರವನ್ನು ರಕ್ಷಿಸುವ ಕೂಗು ಕೇಳಿಸತೊಡಗಿತು. ಸಮೀಪದ ನಾಕ್ಸ್‌ವಿಲ್ ಊರಿನ ಕೆಲವು ಉದ್ಯಮಿಗಳು ಈ ಪರ್ವತಗಳನ್ನು ನ್ಯಾಷನಲ್ ಪಾರ್ಕ್ ಆಗಿ ಪರಿವರ್ತಿಸಲು ನಿಧಿ ಸಂಚಯನ ಪ್ರಾರಂಭಿಸಿ, ಸುಮಾರು 515 ಸಾವಿರ ಎಕರೆ ಭೂಮಿಯನ್ನು ಖರೀದಿಸಿದರು. 1934ರಲ್ಲಿ  ಅಮೆರಿದಕ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್ ಇದನ್ನು 'ಗ್ರೇಟ್ ಸ್ಮೋಕಿ ಮೌಂಟನ್ ನ್ಯಾಷನಲ್ ಪಾರ್ಕ್' ಎಂದು ಘೋಷಿಸಿದರು.

ಎತ್ತರದಲ್ಲಿ ಆವರಿಸಿರುವ ತಿಳಿನೀಲಿ ಕಾವಳ ಈ ಬೆಟ್ಟದ ಮೇಲೆ ತೇಲಾಡುತ್ತಿರುವ ದೃಶ್ಯ ಇಲ್ಲಿ ಎಲ್ಲ ಕಾಲದಲ್ಲೂ ಸಾಮಾನ್ಯವಾಗಿ ಕಾಣಿಸುವುದರಿಂದ 'ಸ್ಮೋಕಿ' ಎನ್ನುವ ಹೆಸರು ಬಂದಿದೆ. ನ್ಯಾಷನಲ್ ಪಾರ್ಕ್‌ನ  ಸ್ಥಾನಮಾನ ಬಂದಂತೆಯೇ ಪ್ರವಾಸೋದ್ಯಮ ದೊಡ್ಡ ಮಟ್ಟದಲ್ಲಿ